(*b*) Rs. 512.2 lakhs.

(*c*) Rs. 168.4 lakhs.
Rs. 136 lakhs (including Transport, Publicity, etc).
Rs. 8.5 lakhs (including Printing charges).
Rs. 199.3 lakhs.

(*d*) It is not considered necessary to take such a decision at this stage.

Mysore Lottery Scheme

94. Sri M. H. JAYAPRAKASH NARAYAN (Sirsi).—

Will the Minister for Finance, Planning and Youth Welfare be pleased to state :—

(*a*) the amount realised by the State Government by the sale of lottery tickets from the date of commencement of the Mysore State Government Lottery ;

(*b*) the amount that was earmarked for distribution by way of prizes ;

(*c*) out of the amount so earmarked for distribution of prizes the amount of savings to the Government due to the non-claiming of prizes by the winners in time ;

(*d*) the various type of expenditure incurred every month to run the Office of Mysore Lotteries ;

(*e*) the net income derived per month as compared with the income and expenditure ?

Sri RAMAKRISHNA HEGDE (Minister for Finance, Planning and Youth Welfare).—

(*a*) Rs. 512.2 lakhs.

(*b*) Rs. 178.7 lakhs.

(*c*) Rs. 10.27 lakhs.

(SRI RAMAKRISHNA HEGDE)

(*d*) Details are given in the following statement :

STATEMENT

Month	Prize money	Commission (to agents) Publicity and Transport, etc.	Establishment, Printing and other charges	Total
		(In lakhs of Rupees)		
From October to January 1970.	18·33	17·15	1·75	37·23
February 1970 ...	21.45	20·62	1·13	43·20
March 1970 ...	33·50	27·50	1·23	62·23
April 1970 ...	39·20	28·61	1·30	69·11
May 1970 ...	22·45	19·25	1·14	42·84
June 1970 ...	16·75	11·51	1·00	29·26
July 1970 ...	16·75	11·30	1·00	29·05
Total	168·43	135·94	8·55	312·92

(*e*) 1. From October to

1. January	1970	Rs.	31.36	Lakhs.
2. February	1970	...	31.80	,,
3. March	1970	...	37.77	,,
4. April	1970	...	38.33	,,
5. May	1970	...	27.16	,,
6. June	1970	...	16.79	,,
7. July	1970	...	16.09	,,
		Rs.	199.30	,,

Sir, I would like to add to the printed answer that subsequently the 8th draw was also held. The total number of tickets issued is 50 lakhs, each series consisting of 10 lakhs. The number of tickets sold is 50 lakhs ; the commission paid to Mysore Sales International Rs. 13·75 lakhs and the prizes so far paid Rs. 10·50 lakhs.

ಶ್ರೀ ಜೆ. ಆರ್. ಹಾಲಸ್ವಾಮಿ.—ಸ್ವಾಮಿ, ಈಗ ಸರ್ಕಾರದವರು ನಡೆಸುವ ರಾಟರಿಯಲ್ಲಿ ಬಂಪರ್ ಪ್ರೈಜನ್ನು ಕೊಡುತ್ತೇವೆ ಎಂದು ಅನೌನ್ಸ್ ಮಾಡಿದ್ದಾರೆ. ಆದ್ದರಿಂದ ಬಂಪರ್ ಪ್ರೈಜ್ ಕೊಡುವುಕ್ಕೂ ಬದರಾಗಿ ಹೆಚ್ಚು ಜನಗಳನ್ನು ಲಕ್ಷಾಧೀಶ್ವರರನ್ನಾಗಿ ಮಾಡುವ ಉದ್ದೇಶದಿಂದ ನಂಬರ್ ಆಫ್ ಪ್ರೈಜುಗಳನ್ನು ಜಾಸ್ತಿ ಮಾಡುವುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಲಕ್ಷ ಮತ್ತು 50 ಸಾವಿರ ರೂಪಾಯಿಗಳ ಪ್ರೈಜುಗಳನ್ನು ಜಾಸ್ತಿ ಮಾಡಿದ್ದೇವೆ. ಮತ್ತು ಇತರೇ ಪ್ರೈಜುಗಳ ಸಂಖ್ಯೆಯನ್ನೂ ಹೆಚ್ಚುಮಾಡಿದ್ದೇವೆ. ನಾವು ಬಂಪರ್ ಪ್ರೈಜನ್ನು ಇಡದಿದ್ದರೆ ಬೇರೆ ಸ್ಕೇಟಿನ ರಾಟರಿಯ ಬಗ್ಗೆ ಜನರ ಆಕರ್ಷಣೆ ಹೆಚ್ಚಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, 29 ಜನ ಮಂತ್ರಿಮಂಡಲ ಇರುವ ಸರ್ಕಾರಕ್ಕೆ ಬಕಾನುರನ ಹಾಗೆ ಬೇಕಾದಷ್ಟು ದುಡ್ಡು ಬೇಕಾಗಿದೆ. ಹೆಂಡ ಮಾರುವುದಕ್ಕೆ ಅವಕಾಶ ಕೊಟ್ಟು ಅದರಲ್ಲಿ 15 ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡುತ್ತೀರಿ, ಜೂಜು, ರಾಟರಿಗೆ ಅವಕಾಶ ಮಾಡಿಕೊಟ್ಟು ಅದರಿಂದ 3-4 ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡುತ್ತೀರಿ, ಇನ್ನು ಒಂದು ಬಾಕಿ ಇದೆ. ಅದು ಏನೇಂದರೆ ಸೂಳೆಕೇರಿಯನ್ನು ಓಪನ್ ಮಾಡಿ ಹಣ ಸಂಪಾದನೆ ಮಾಡುವುದು, ಅದನ್ನೂ ಮಾಡಬೇಕೆಂದು ತಮ್ಮ ಅಭಿಪ್ರಾಯವೇನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾವು ಎರಡು ಕೆಲಸಗಳನ್ನು ಮಾಡಿದ್ದೇವೆ. ಮೂರನೇ ಕೆಲಸ ಮಾಡುವುದನ್ನು ಮಾನ್ಯ ಸದಸ್ಯರ ಪಕ್ಷಕ್ಕೆ ನಾವು ಬಿಟ್ಟುಕೊಟ್ಟು ಹೋಗುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ರಾಟರಿ ಪದ್ಧತಿ ಸಮಾಜವಾದದ ಮೂಲತತ್ವಕ್ಕೆ ವಿರೋಧವಾಗಿದೆ. ಸಮಾಜವಾದವನ್ನು ಜಾರಿಗೆ ತರುವಂತಹ ಒಂದು ನೀತಿಯನ್ನು ಕಾಂಗ್ರೆಸ್ ನಂಸ್ಥೆ ಅವಶ್ಯಕವಾಗಿ ಇಟ್ಟುಕೊಂಡಿರುವುದರಿಂದ ಈ ರಾಟರಿ ಪದ್ಧತಿಯನ್ನು ರದ್ದು ಮಾಡುತ್ತೀರಾ ? ಹಣವನ್ನು ಗಳಿಸಬೇಕೆಂದು ಒಂದು ಕಡೆ ಹೆಂಡವನ್ನು ಕುಡಿಯುವುದಕ್ಕೆ ಅವಕಾಶ ಮಾಡಿಕೊಟ್ಟು ಕುಡುಕರನ್ನು ಜಾಸ್ತಿ ಮಾಡುತ್ತಿದ್ದೀರಿ, ಮತ್ತೊಂದು ಕಡೆ ರಾಟರಿ, ಜೂಜುಗಳನ್ನು ತಂದು ಕೆಟ್ಟರೀತಿಯಲ್ಲಿ ಹಣವನ್ನು ಗಳಿಸುತ್ತಿದ್ದೀರಿ, ಅದರಂತೆ ಸೂಳೆಗಾರಿಕೆಯನ್ನೂ ಸಹ ಜಾರಿಗೆ ತಂದು ಇನ್ನೂ ಹೆಚ್ಚು ಹಣವನ್ನು ಗಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

2-00 P. M.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಇದರಲ್ಲಿ ಸಮಾಜವಾದದ ಪ್ರಶ್ನೆ ಇಲ್ಲ. ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಪ್ರಾರಂಭ ಮಾಡಿದ್ದಾರೆ. ನಾವು ರಾಟರಿಯನ್ನು ಪ್ರಾರಂಭ ಮಾಡದಿದ್ದರೆ ನಮ್ಮ ರಾಜ್ಯದ ಹಣವೆಲ್ಲಾ ಬೇರೆ ರಾಜ್ಯಕ್ಕೆ ಹೋಗುತ್ತದೆಂದು ತಿಳಿದುಕೊಂಡು ಪ್ರಾರಂಭ ಮಾಡಿದೆವು. ನನಗೆ ಗೊತ್ತಿರುವಂತೆ ಈ ಮನೆಯ ಅನೇಕ ಮಾನ್ಯ ಸದಸ್ಯರು ರೆಗ್ಯುಲರ್ ಆಗಿ ರಾಟರಿ ಟಿಕೆಟ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಹಾರಾಷ್ಟ್ರ ಸರ್ಕಾರದವರು ತಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳ ರಾಟರಿ ಟಿಕೆಟ್‌ಗಳ ಮಾರಾಟವನ್ನು ಬಂದ್ ಮಾಡಿರುವಂತೆ ನಮ್ಮ ರಾಜ್ಯದಲ್ಲಿಯೂ ಬೇರೆ ರಾಜ್ಯಗಳ ರಾಟರಿ ಟಿಕೆಟ್‌ಗಳ ಮಾರಾಟವನ್ನು ಬಂದ್ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ಸಧ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಿದ್ದೇವೆ. ಈಗ ರೆಸಿಪ್ರೋಕಲ್ ಬೇಸಿಸ್ ಮೇರೆ ಕೆಲವು ರಾಜ್ಯಗಳ ಟಿಕೆಟ್‌ಗಳನ್ನು ನಮ್ಮ ರಾಜ್ಯದಲ್ಲಿ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—1970-71ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಾಗ ಈ ಬಾಬಿನಿಂದ ಎಷ್ಟು ಆದಾಯ ಬರುತ್ತದೆಂದು ನೀವು ನೀರಿಕ್ಷಣೆ ಮಾಡಿದ್ದಿರಿ ಅಷ್ಟು ಜಮಾ ಆಗಿದೆಯೇ ? ಏಕೆಂದರೆ ಒಟ್ಟು 512·2 ಲಕ್ಷ ರೂಪಾಯಿಗಳ ರಾಟರಿ ಟಿಕೆಟ್ ಮಾರಾಟದಿಂದ ಸರ್ಕಾರಕ್ಕೆ ಉಳಿದಿರುವುದು ಕೇವಲ 199.3 ಲಕ್ಷ ರೂಪಾಯಿಗಳು. ಇದನ್ನು ನೋಡಿದರೆ ಮೂಗಿಗಿಂತ ಮೂಗುತಿಯೇ ಭಾರ ಎಂದು ಅನ್ನಿಸುವುದಿಲ್ಲವೇ ? ಇದರಿಂದ ಬರುವ ಎಲ್ಲ ಆದಾಯವನ್ನು ನೀವೇ ತಿನ್ನುವುದಕ್ಕೆ ನೋಡುತ್ತೀರೋ ಅಥವಾ ಸರ್ಕಾರದ ಟ್ರೆಜರಿಗೆ ಆದಾಯ ಬರುವುದಕ್ಕೆ ಏರ್ಪಾಡು ಮಾಡುತ್ತೀರೋ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬಾಬಿನಿಂದ ಈ ವರ್ಷದಲ್ಲಿ ಒಂದು ಕೋಟಿ 87 ಲಕ್ಷ ರೂಪಾಯಿಗಳ ಆದಾಯ ಬರಬಹುದೆಂದು ಹೇಳಲಾಗಿತ್ತು. ಈಗಿನ ಅಂದಾಜಿನ ಪ್ರಕಾರ ಇದಕ್ಕಿಂತ ಇನ್ನೂ ಹೆಚ್ಚು ಆದಾಯ ಬರುವುದೆಂದು ಕಾಣುತ್ತದೆ. ಆದ್ದರಿಂದ ಮೂಗಿಗಿಂತ ಮೂಗುತಿ ಭಾರ ಎಂದು ಹೇಳುವುದು ನಿಜವಲ್ಲ. ನಾವು ಹೆಚ್ಚಿನ ಬಹುಮಾನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆಕರ್ಷಣೆ ಇರುವುದಿಲ್ಲ. ಮತ್ತು ಕಮಿಷನ್ ಕೊಡುತ್ತೇವೆ. ಈ ಕಮೀಷನ್ನಿನಲ್ಲಿ ಒಂದು ಭಾಗ ನಮ್ಮದೇ ಆದಂತಹ ಒಂದು ಸಂಸ್ಥೆಗೆ ಹೋಗುತ್ತದೆ. ಮತ್ತು ಇದರಿಂದ ಸರ್ಕಾರಕ್ಕೆ ವಿಶೇಷವಾದಂಥ ಲಾಭವಿದೆ.

ಶ್ರೀ ಎಸ್. ಬಂಗಾರಪ್ಪ.—ನಾವು ಲಾಟರಿ ಪ್ರಾರಂಭ ಮಾಡದಿದ್ದರೆ ನಮ್ಮ ರಾಜ್ಯದ ಹಣ ವೆಲ್ಲಾ ಹೊರ ರಾಜ್ಯಗಳಿಗೆ ಹೋಗುತ್ತಿತ್ತು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಣ ಕಾಸಿನ ಪರಿಸ್ಥಿತಿಯನ್ನು ಯೋಚನೆ ಮಾಡಿದಾಗ ತಾವು ಹೇಳುವುದು ಸರಿಯಾಗಿ ಕಾಣಬಹುದು. ಹಣ ಗಳಿಸುವುದಕ್ಕೆ ಹಲವಾರು ದಾರಿಗಳು ಇವೆ. ಮಾನ್ಯ ಶಾಮಣ್ಣನವರು ಮತ್ತು ಮಾನ್ಯ ಜಯಪ್ರಕಾಶ್ ನಾರಾಯಣ್ ಅವರು ಹಣ ಗಳಿಸುವ ಬಗ್ಗೆ ಒಂದು ಸಲಹೆ ಕೊಟ್ಟಾಗ ಮಾನ್ಯ ಮಂತ್ರಿಗಳು ಅದನ್ನು ನಿಮಗೇ ಬಿಟ್ಟಿದ್ದೇವೆ ಎಂದು ಹೇಳಿದರು. ಇದು ಸರ್ಕಾರದ ನೀತಿಯ ಪ್ರಶ್ನೆಯಾಗಿದೆ. ಈ ರೀತಿ ಲಾಟರಿ ನಡೆಸುವುದರಿಂದ ಬಂಡವಾಳಶಾಹಿ ರಾಜ್ಯವಾಗುತ್ತದೆ. ಮೈಸೂರು ರಾಜ್ಯ ಮಾದರೀ ರಾಜ್ಯವಾಗಿರಬೇಕು. ಆದಕಾರಣ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಾಗದ ಬರೆದು ಎಲ್ಲ ರಾಜ್ಯಗಳಲ್ಲಿಯೂ ಲಾಟರಿ ಟಿಕೆಟ್ ಮಾರಾಟವನ್ನು ನಿಲ್ಲಿಸಬೇಕೆಂದು ಒತ್ತಡ ತರುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತ ವಿಚಾರವಲ್ಲ. ಇದು ಆಯಾ ರಾಜ್ಯ ಸರ್ಕಾರಗಳಿಗೆ ಸೇರಿದಂತಹ ವಿಚಾರ. ಈ ಬಗ್ಗೆ ಯಾವುದೇ ನಿರ್ಬಂಧ ಹಾಕುವುದಕ್ಕೆ ಕೇಂದ್ರ ಸರ್ಕಾರಕ್ಕೆ ಸಾಧ್ಯವಿಲ್ಲ. ಇದರಿಂದ ಬಹಳ ಜನ ಶ್ರೀಮಂತರಾಗುವುದಕ್ಕೆ ಅವಕಾಶವಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಸಾಮಾನ್ಯವಾಗಿ ನೋಡುವುದಾದರೆ ಇದುವರೆಗೆ ಬಡತನದಲ್ಲಿರುವವರಿಗೆ ಹೆಚ್ಚಿನ ಬಹುಮಾನ ಹೋಗಿದೆ. ಶ್ರೀಮತಿ ಫರ್ನಾಂಡಿಸ್ ಅವರು ಶ್ರೀಮಂತರೆಂದು ಕಾಣುತ್ತದೆ. ಅವರಿಗೆ ಮಾತ್ರ ಒಂದು ಬಹುಮಾನ ಹೋಗಿದೆ.

ಶ್ರೀ ಕೆ. ಪ್ರಭಾಕರ್.—ಈಗ ಜನರು ಕುಡಿಯುತ್ತಿದ್ದಾರೆ. ಅದರ ಜೊತೆಗೆ ಈಗ ಲಾಟರಿಯನ್ನು ತಂದಿದ್ದೀರಿ. ಇಂತಿಂತಹ ಜೂಜುಗಳು ನ್ಯಾಯಬದ್ಧವಾಗಿವೆ ಎಂದು ಮಾಡಿ ಆ ಬಗ್ಗೆ ಒಂದು ಆಕ್ಟ್‌ನ್ನು ಪಾಸ್ ಮಾಡಿ ಈ ಬಗ್ಗೆ ಪೋಲೀಸರಿಂದ ಆಗುತ್ತಿರುವ ಕಿರುಕುಳವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಜೂಜಿನ Instinct ಪ್ರತಿಯೊಬ್ಬ ಮನುಷ್ಯನಲ್ಲೂ ಕೂಡ ಒಂದೊಂದು ರೀತಿಯಲ್ಲಿ ಇರುತ್ತದೆ. ಈ ಬಗ್ಗೆ ಕೆಲವರು ಕಂಟ್ರೋಲ್ ಮಾಡಿಕೊಳ್ಳುತ್ತಾರೆ, ಕೆಲವರು ಕಂಟ್ರೋಲ್ ಮಾಡಿಕೊಳ್ಳುವುದಿಲ್ಲ. ನಾವು ಕೂಡ ಮನೆಯಲ್ಲಿ ಇಸ್ಪೀಟ್ ಆಟ ಆಡುತ್ತೇವೆ. ನಮ್ಮನ್ನೆ ಆಡಿದರೆ ಚೆನ್ನಾಗಿರುವುದಿಲ್ಲವೆಂದು ಪಾಯಿಂಟ್‌ಗೆ ಒಂದು ಪೈಸೆಯಂತೆ ಇಟ್ಟುಕೊಂಡು ಆಡುತ್ತೇವೆ. ಇದು ಕೂಡ ಜೂಜೇ ಆಗುತ್ತದೆ.

ಶ್ರೀ ಕೆ. ಎಸ್. ಪುಟ್ಟರಂಗನಾಥ್.—ಬಹುಮಾನ ವಿತರಣೆ ಮಾಡಬೇಕಾಗಿದ್ದ ಹಣದಲ್ಲಿ ಗೊತ್ತಾದ ಕಾಲಕ್ಕೆ ಗೊತ್ತಾದ ಬಹುಮಾನಿತರು ಬಾರದೇ ಹೋಗಿ ಸರ್ಕಾರಕ್ಕೆ ಉಳಿತಾಯವಾದ ಮೊಬಲಗು 10·27 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ನನಗೆ ತಿಳಿದಿರುವಂತೆ 27 ಲಕ್ಷ ರೂಪಾಯಿಗಳು ಈ ರೀತಿಯಿಂದ ಉಳಿತಾಯವಾಗಿದೆ ಎಂದು ತಿಳಿದುಬಂದಿದೆ. ಅಧಿಕಾರಿಗಳು ಈ ಹಣವನ್ನು ಪೋಲು ಮಾಡಿದ್ದಾರೆಂಬುದನ್ನು ನೀವು ಒಪ್ಪಿಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಯಾವ ತರಹ ಹಣದ ಪೋಲಿಗೂ ಅವಕಾಶವಿಲ್ಲ. ಪ್ರತಿಯೊಂದು ಅಂಕಿಅಂಶಗಳನ್ನು ಕಣ್ಣಲ್ಲಿ ಎಣ್ಣೆ ಇಟ್ಟುಕೊಂಡು ನೋಡಲಾಗುತ್ತದೆ. ಆಡಿಟ್ ರಿಪೋರ್ಟ್ ಇರುತ್ತದೆ. ಅಕೌಂಟೆಂಟ್ ಜನರಲ್ ಅವರು ಸಹ ಅಂಕಿಅಂಶಗಳನ್ನು ತನಿಖೆ ಮಾಡುವುದರಿಂದ ಹಣ ಪೋಲಾಗಿದೆ ಎಂದು ಗೂಹೆ ಮಾಡುವುದು ಸರಿಯಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತರ ರಾಜ್ಯಗಳವರು ಲಾಟರಿಯನ್ನು ಪ್ರಾರಂಭ ಮಾಡಿದ್ದರಿಂದ ನಾವು ಕೂಡ ಪ್ರಾರಂಭ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅಶೋಕ ಚಕ್ರವರ್ತಿ ಕಾಲದಲ್ಲಿ ಒಂದು ಲಕ್ಷ 50 ಸಾವಿರ ಗವರ್ನಮೆಂಟ್ ಮೇನೇಜ್ಡ್ ಬ್ರಾತರ್ಸ್ ಇದ್ದವು. ಇದು ಆ ಕಾಲದ ಚರಿತ್ರೆಯಿಂದ ಗೊತ್ತಾಗುತ್ತದೆ. ಆದ್ದರಿಂದ ಇದನ್ನು ಕೂಡ ಸರ್ಕಾರದವರು ಉದಾಹರಣೆಯಾಗಿ ತೆಗೆದುಕೊಂಡು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಶೋಕ ಚಕ್ರವರ್ತಿ ಕಾಲದಲ್ಲಿ ಏನೇನು ಜಾರಿಯಲ್ಲಿ ಇತ್ತು ಎಂಬುದು ಗೊತ್ತಿಲ್ಲ. ಮಾನ್ಯ ಸದಸ್ಯರು ಆಗ ಹುಟ್ಟಿದ್ದರೋ ಏನೋ ನನಗೆ ಗೊತ್ತಿಲ್ಲ. ನಾವು ಈಗಿನ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ಭೂತ ಕಾಲದ್ದನ್ನು ನಾವು ಅನುಸರಣೆ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಸುತ್ತಮುತ್ತಲ ರಾಜ್ಯಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು ಅದು ನಮಗೆ ಹಿತಕರವಾಗಿದೆಯೇ ಇಲ್ಲವೇ ಎಂಬುದನ್ನು ನೋಡಿ ಕೊಂಡು ಅದರಂತೆ ಮಾಡಬೇಕಾಗುತ್ತದೆ. ಇದನ್ನು ಬಿಟ್ಟು ಅಶೋಕ ಮತ್ತು ಅಕ್ಬರ್‌ನ ಕಾಲದ ಉದಾಹರಣೆಗಳನ್ನು ತೆಗೆದುಕೊಂಡು ಏನೂ ಮಾಡುವುದಕ್ಕಾವುಗುವುದಿಲ್ಲ.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಸರಕಾರ ಲಾಟರಿ ನಡೆಸುವಂತೆ ಇನ್ನೂ ಕೆಲವು ಸಂಘ ಸಂಸ್ಥೆಗಳವರೂ ಲಾಟರಿಗಳನ್ನು ನಡೆಸಬೇಕೆಂದು ಸರಕಾರದವರನ್ನು ಕೇಳಿದರೆ ಅವರಿಗೂ ಸರಕಾರ ಅಧಿಕಾರ ಕೊಡುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಸರಕಾರ ಲಾಟರಿ ಯೋಜನೆ ತರುವುದಕ್ಕೆ ಮೊದಲು ಕೆಲವು ಸಂಸ್ಥೆಗಳಿಗೆ ಎಂದರೆ ರೆಡ್ ಕ್ರಾಸ್ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಾರ್ವಜನಿಕ ಸಂಸ್ಥೆಗಳಿಗೆ ಒಂದು ಸಲ ಅವಕಾಶ ಕೊಡಲಾಗಿತ್ತು. ಅದು ಲಾಟರಿ ಎಂದು ಕರೆಯುತ್ತಿರಲಿಲ್ಲ. ಅವನ್ನು ರ್ಯಾಫಲ್‌ಗಳೆಂದು ಕರೆಯಲಾಗುತ್ತಿತ್ತು. ಬೇರೆ ಯಾವ ಸಂಸ್ಥೆಗಳವರೂ ಲಾಟರಿ ಆರಂಭಿಸ ಬೇಕೆಂದು ಕೇಳಿದರೆ ಅವರಿಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆಯಾಯಿತು.

QUESTIONS FOR ANSWERS ON THE DAY

(but not taken up)

Water Supply Position in Tumkur Town

55. Sri B. P. GANGADHAR (Tumkur).—

Will the Minister of State for Municipal Administration be pleased to refer to the reply given to clause (*a*) of Starred Question Number 113 (VII list) on 29th January 1970 regarding Water Supply Scheme at Tumkur and state :—

(*a*) whether the line estimate for Rs. 18.75 lakhs with Mydala Tank as source, for water supply to Tumkur Town has been sanctioned and work started ;

(*b*) if so, the stage of construction of the work ;

(*c*) if not, the reasons for the delay in taking up the work ?

Sri B. M. PATIL (Minister of State for Municipal Administration).—

(*a*) No.

(*b*) Does not arise in view of reply to clause (*a*).

(*c*) Impounding extra quantity of water in Mydala tank involves submersion of foreshore lands at heavy expense. The proposal is therefore dropped.